# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ.ಸಿ. ನಂ.32/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ವೀರಕುಮಾರ | ಸಿಡಬ್ಲ್ಯೂ-1 | ಪಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | ಮಾರುತಿ ಮರಕಾಲೆ | | |
| ವಯಸ್ಸು | 38 ವರ್ಷ | | |
| ಉದ್ಯೋಗ | ಮೇಕ್ಯಾನಿಕ್ | | |
| ವಾಸ ಸ್ಥಳ | ಕಾಡವಾಡ, ತಾಃಜಿಃ ಬೀದರ | | |

ದಿನಾಂಕ 14-09-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಮೃತ ಪೂಜಾ ತಂದೆ ಸಿದ್ದಣ್ಣ ಕಂದಗೋಳ ನನ್ನ ಸಂಬಂಧಿಕಳು ಇರುತ್ತಾಳೆ. ಆರೋಪಿ ನಮ್ಮ ಸಂಬಂಧಿಕನಾಗಬೇಕು. ಈಗ 2 ವರ್ಷಗಳ ಹಿಂದೆ ಸಾಯಂಕಾಲ 08.00 ಗೆ ನಾನು ಮನೆಯಲ್ಲಿದ್ದಾಗ ಆರೋಪಿ ನನಗೆ ಅಪಘಾತದ ವಿಷಯ ತಿಳಿಸಿರುತ್ತಾನೆ. ಅಪಘಾತ ಎಲ್ಲಿ ಆಗಿತ್ತು, ಹೇಗೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಕಲಬುರಗಿಯ ಯುನೈಟೆಡ್ ಆಸ್ಪತ್ರೆಗೆ ಅಪಘಾತವಾದ ನಂತರ ಭೇಟಿ ಕೊಟ್ಟಿರುತ್ತೇನೆ. ಅಲ್ಲಿ ಹೋಗಿ ನೋಡಿದ್ದು ಪೂಜಾ ಇವಳಿಗೆ ಭಾರಿ ಗಾಯಗಳಾಗಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆರೋಪಿಗೆ ತರಚಿದ ಗಾಯಗಳಾಗಿದ್ದು ಆಸ್ಪತ್ರೆಗೆ ಸೇರಿಸಿರಲಿಲ್ಲ. ನಂತರದಲ್ಲಿ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಂತರದಲ್ಲಿ ದಿನಾಂಕ 15.08.2020 ರಂದು ಪೂಜಾ ಇತಳು ಅಪಘಾತದ ಗಾಯಗಳಿಂದ ಗುಣಮುಖಳಾಗದೇ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾಳೆ. ನಂತರದಲ್ಲಿ ನಾನು ಪೊಲೀಸ್ ಠಾಣೆಗೆ ಭೇಟಿ ಕೊಟ್ಟಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ದಿನಾಂಕ 09.08.2020 ರಂದು 08.00 ಗೆ ಆರೋಪಿತನೇ ನನಗೆ ಪೋನ ಮಾಡಿ ತಾನು ಉಡಗಿ ಗ್ರಾಮದಿಂದ ಮೊಟಾರ ಸೈಕಲ ನಂ.KA-39 J-5494 ನ್ನೆದ್ದರ ಮೇಲೆ ಪೂಜಾ ಇತಳನ್ನು ಕೂಡಿಸಿ ಕೊಂಡು ಸೇಡಂ-ಚಿಂಚೊಳ್ಳಿ ರೋಡಿ ಮೇಲೆ ಹೊರಟಾಗ ಸುರವಾರ ಗ್ರಾಮ ದಾಟಿ ರೋಡಿನ ಎಡಗಡೆಗೆ ಮೋಟಾರ ಸೈಕಲ ನಿಯಂತ್ರಣ ತಪ್ಪಿ ಇಬ್ಬರು ಮೋಟಾರ ಸೈಕಲ ಮೇಲಿಂದ ಬಿದ್ದಿರುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ಪೂಜಾ ಇವಳಿಗೆ ತಲೆಯ ಎದುರುಗಡೆ ಬಲಗಣ್ಣಿನ ಮೇಲೆ ಭಾರಿ ರಕ್ತಗಾಯಗಳಾಗಿದ್ದವು ಮತ್ತು ಅವಳ ಮೈ-ಕೈಗಳಿಗೆ

ತೆರಚಿದ ಗಾಯಗಳು ಆಗಿದ್ದವು ಎಂದು ಸಹ ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಾನು ನಂತರದಲ್ಲಿ ಕಲಬುರಗಿಯ ಯುನೈಟೆಡ್ ಆಸ್ಪತ್ರೆಗೆ ಭೇಟಿ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಆರೋಪಿ ತಾನು ನಡೆಸುತ್ತಿದ್ದ ಮೋಟಾರ ಸೈಕಲನ್ನು ಅತೀ ವೇಗದಿಂದ ಮತ್ತು ನಿಷ್ಕಾಳಜೀತನದಿಂದ ನಡೆಸಿಕೊಂಡು ಹೋಗಿ ಸುರವಾರ ಗ್ರಾಮ ದಾಟಿದ ನಂತರ ರೋಡಿನ ಮೇಲೆ ಒಮ್ಮೆಲೆ ಸ್ಕಿಡ್ ಮಾಡಿ ಅಪಘಾತ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ ದಿನಾಂಕ 15.08.2020 ರಂದು ಪೊಲೀಸ್ ಠಾಣೆಗೆ ಭೇಟಿ ಕೊಟ್ಟು ಆರೋಪಿಯ ಮನೆತನದ ಹೆಸರಿನ ಕುರಿತು ಮತ್ತು ಪೂಜಾ ಇತಳ ಸಾವಿನ ಕುರಿತು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮರು ಹೇಳಿಕೆ ಭಾಗವನ್ನು ನಿಪಿ–2 ಎಂದು ಗುರುತಿಸಲಾಯಿತು. ಆರೋಪಿ ನಮ್ಮ ಸಂಬಂಧಿಕ ಎಂದರೆ ಸರಿ. ಅವನಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ .ನ್ಯಾ ದಂ. ಸೇಡಂ.

*SYH

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ.ಸಿ. ನಂ.32/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಶರಣಪ್ಪ | ಸಿಡಬ್ಲ್ಯೂ-6 | ಪಿಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | ಶಿವರಾಯ ಬಿರೇದಾರ | | |
| ವಯಸ್ಸು | 43 ವರ್ಷ | | |
| ಉದ್ಯೋಗ | ಒಕ್ಕಲುತನ | | |
| ವಾಸ ಸ್ಥಳ | ಭೂತನೂರ ಗ್ರಾಮ | | |

ದಿನಾಂಕ 14-09-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ತೋರಿಸುತ್ತಿರುವ ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ತಮ್ಮ ಸಹಿ ಗುರುತಿಸಿದ ದಾಖಲೆ ಗುನ್ಹೆ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಪಂಚನಾಮೆ ಮಾಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 11.08.2020 ರಂದು ಮುಂಜಾನೆ 09.00 ಗಂಟೆಗೆ ಸುರವಾರ ಗ್ರಾಮ ದಾಟಿ ವಿಭಾಕರ ಪಾಟೀಲ ಇವರ ಹೊಲದ ಹತ್ತಿರ ಒಂದು ಅಪಘಾತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆಗ ಪೊಲೀಸರು ಪಂಚನಾಮೆಗೆಂದು ನನ್ನನ್ನು ಕರೆಯಿಸಿ ಮುಂಜಾನೆ 10.00 ಗಂಟೆಯವರೆಗೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಒಂದು ಮೋಟಾರ ಸೈಕಲ ನಂ. KA-39 J-5494 ನೆದ್ದನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಒಂದು ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಭಾಗವಹಿಸಿದ್ದರೂ ಆರೋಪಿಗೆ ಸಹಾಯಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ .ನ್ಯಾ ದಂ. ಸೇಡಂ.

*SYH